ದಿನಾಂಕಃ 06-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ ಆರ್ ಎಸ್ ವಕೀಲರಿಂದ

ಪಿಳ್ಳಮ್ಮನ ಜಮೀನಿಗೆ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಪಿಳ್ಳಮ್ಮ ಯಾರು ಅಂತ ಗೊತ್ತಿರುವುದಿಲ್ಲ. ಪಿಳ್ಳಮ್ಮನವರ ಜಮೀನು ಪೂರ್ವಕ್ಕೆ ಯಾರ ಜಮೀನು ಬರುತ್ತದೆ ಅಂತ ಗೊತ್ತಿಲ್ಲ. ನನಗೆ ಅಕ್ಕಿಮಂಗಲದಲ್ಲಿ ಜಮೀನು ಇರುತ್ತದೆ. ಸರ್ವೆ ನಂ. 143 ನನ್ನ ತಾತನ ಹೆಸರಿನಲ್ಲಿ ಇರುತ್ತದೆ. ನನಗೆ ಅಶೋಕ್ ಕುಮಾರ್ ಹುಟ್ಟಿದಾಗಿನಿಂದ ಪರಿಚಯ. ಅಶೋಕ್ ಕುಮಾರ್ ರವರು ನಮ್ಮ ಪಕ್ಕದಲ್ಲಿ ಇದ್ದು ಯಾವುದೇ ವ್ಯವಹಾರಗಳು ಇರುವುದಿಲ್ಲ. ದಾವೆಯಲ್ಲಿ 1 ರಿಂದ 6 ಪ್ರತಿವಾದಿಗಳು ಯಾರು ಅಂತ ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಯಾಗಲೀ ನೀವು ಹೇಳಿದ ಯಾವುದೇ ವ್ಯಕ್ತಿಯಾಗಲೀ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ . ನೀವು ದಾವಾ ಜಮೀನು ನೋಡಿರುತ್ತೇನೆ. ಸುಬ್ಬರಾಯಪ್ಪ, ಜಯಲಕ್ಷ್ಮಮ್ಮ, ಸುನಂದಮ್ಮ ಯಾರು ಅಂತ ಗೊತ್ತಿಲ್ಲ. ಅಶೋಕ್ ಕುಮಾರ್ ರವರು ಯಾರ ಮೇಲೆ ದಾವೆ ಸಲ್ಲಿಸಿರುತ್ತಾರೆ ಗೊತ್ತಿಲ್ಲ. ಎಷ್ಟು ಸರ್ವೆ ನಂಬರ್ ಗಳ ಮೇಲೆ ದಾವೆ ಸಲ್ಲಿಸಿರುತ್ತಾರೆ ಅಂತ ಗೊತ್ತಿಲ್ಲ. ಈ ದಾವೆಯಲ್ಲಿ ಯಾರ ಮಧ್ಯೆ ತಕರಾರು ಇದೆ ಅಂತ ಗೊತ್ತಿಲ್ಲ. ನೀವು ದಾವಾ ಜಮೀನು ನೋಡಿರುವುದಿಲ್ಲ ನೀವು ಹೇಳುವ ಅಶೋಕ್ ಕುಮಾರ್ ದಾವಾ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸುಬ್ಬರಾಯಪ್ಪನ ಕುಟುಂಬದ ಸಧಸ್ಯರ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ ಈಗ ಇರುವುದು ಅಶೋಕ್ ಕುಮಾರ್. ಅಶೋಕ್ ಕುಮಾರ್ ಮತ್ತು ನೀವು ತುಂಬಾ ವಿಶ್ವಾಸ ಎಂದರೆ ನಾವು ಪಕ್ಕದಲ್ಲಿ ಇರುತ್ತೇವೆ. ಅಕ್ಕಿಮಂಗಲದಲ್ಲಿ ನಿಮ್ಮದು ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.